ಇಲ್ಲವೋ ನಾಪತ್ತೇನೇ ಆಗಿದ್ದಾಳೋ ಅದೆಲ್ಲಾ ವಿವರಗಳು ಸಿಗಬೇಕಾಗಿದೆ. ಇದರಲ್ಲಿ ನಿಮ್ಮ ಮಾನ ಅಪಮಾನ ಮುಖ್ಯವಾಗಲ್ಲ... ನಾನಿನ್ನು ಬರ್ತೀನಿ' ಎಂದು ಎದ್ದು ಹೊರಗೆ ಬಂದರು.

ಪ್ರೊಫೆಸರ್ ವ್ಯಗ್ರರಾಗಿದ್ದರು.

★★★

ಇನ್‌ಸ್ಪೆಕ್ಟರ್ ಕುಲಕರ್ಣಿ ತಾವು ಸಂಗ್ರಹಿಸಿದ ಎಲ್ಲಾ ಸಾಕ್ಷಿಗಳನ್ನು ಒಟ್ಟುಗೂಡಿಸಿದರು. ಅನಾಟಮಿ ಹಾಲ್‌ನ ಜವಾನ ಸೀನನ ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಲಾಯಿತು. ನಂತರ ಮ್ಯೂಸಿಯಂನಲ್ಲಿ ಮುರಿದಿದ್ದ ಮೊಬೈಲ್ ಫೋನು ಸಾಕ್ಷಿಯದೆಂದು ತಿಳಿದರೂ, ಬೇರಾವ ಮಹತ್ವದ ಸುಳಿವು ಕಾಣಿಸಿರಲಿಲ್ಲ. ನಾಪತ್ತೆಯಾದ ಸಾಕ್ಷಿ ಅನಾಟಮಿಹಾಲ್‌ನ ಒಳಗೆ ಹೋಗಿದ್ದಕ್ಕೆ ಎಲ್ಲಾ ದಾಖಲೆಗಳಿವೆ, ಆದರೆ ಅವಳು ಹೊರಗಡೆ ಬಂದದ್ದಕ್ಕೆ ಯಾವುದೇ ಸಾಕ್ಷಿಗಳು ಸಿಕ್ಕಿರಲಿಲ್ಲ. ಅನಾಟಮಿಯ ಹಾಲ್ ಮತ್ತು ಮ್ಯೂಸಿಯಂ ಎಲ್ಲಾ ಶೋಧಿಸಿದ್ದರೂ ಯಾವ ಸುಳಿವು ಸಿಕ್ಕಿರಲಿಲ್ಲ. ಹಾಗಾದರೆ ಸಾಕ್ಷಿ ಮಾಯವಾಗಿ ಬಿಟ್ಟಳಾ? ಇಲ್ಲ ಅವಳನ್ನೇನಾದರೂ ಕೊಂದು ಎಲ್ಲಾದರೂ ಹೂತು ಹಾಕಿದ್ದಾರಾ? ಬೇರೆ ವಿಭಾಗದ ವಿದ್ಯಾರ್ಥಿನಿಯನ್ನು ಕೊಂದು ಹಾಕಲು ಯಾವುದೇ ಸೂಕ್ತ ಕಾರಣಗಳಿರಲಿಲ್ಲ. ಯಾರಾದರೂ ಅಪಹರಣ ಮಾಡಿದ್ದರೆ? ಇಷ್ಟು ಹೊತ್ತಿಗೆ ಅಪಹರಣಕಾರರು ಏನಾದರೂ ಬೇಡಿಕೆ ಇಟ್ಟಿರುತ್ತಿದ್ದರು. ಅಂತಹುದು ನಡೆದಿರಲಿಲ್ಲ. ಆದರೆ ಸೀನನ ಸಾಕ್ಷ್ಯದಲ್ಲಿ ಪ್ರಮುಖ ಸುಳಿವು ಸಿಕ್ಕಿದ್ದರೂ ಕೊಲೆಗಾರ ಇವನೇ ಎಂದು ಹೇಗೆ ಹೇಳುವುದು? ಹೇಗಾದರಾಗಲಿ ಒಮ್ಮೆ ಮತ್ತೊಮ್ಮೆ ಅದೇ ಜಾಗಕ್ಕೆ ಆದರೆ ತಮಗೆ ಸಿಕ್ಕಿರುವ ಸಾಕ್ಷಿಗಳೊಂದಿಗೆ ಹೋಗೋಣವೆಂದುಕೊಂಡ ಕುಲಕರ್ಣಿ ತಟ್ಟನೆ ಎದ್ದು, 'ಆ ವಿಡಿಯೊ ರೆಕಾರ್ಡ್ ಮಾಡಿದ್ದನ್ನು ಮತ್ತೆ ಮಾಡಬೇಕಾಗಿ ಬರಬಹುದೋ ಏನೋ. ಸೀನ ಭಯದಿಂದ ಉಲ್ಟಾ ಹೊಡೆದರೂ ಹೊಡೆಯಬಹುದು...' ಎಂದು ಕಾನ್‌ಸ್ಟೆಬಲ್‌ಗೆ ಹೇಳಿ, ವಿಡಿಯೊ ರೆಕಾರ್ಡ್ ಮಾಡುವ ಪೇದೆಯನ್ನು ಕರೆದುಕೊಂಡು, ಅವರು ಚಕ್ರವರ್ತಿ ಮೆಡಿಕಲ್ ಕಾಲೇಜಿನ ಆವರಣ ದಾಟಿ ಅನಾಟಮಿ ಹಾಲ್ ಬಳಿ ಬಂದು ನಿಂತರು. ವಿದ್ಯಾರ್ಥಿಗಳೆಲ್ಲಾ ತರಗತಿಯೊಳಗಿದ್ದುದರಿಂದಲೋ ಏನೋ ಯಾರೂ ಓಡಾಡುತ್ತಿರಲಿಲ್ಲ. ಅನಾಟಮಿ ಹಾಲ್‌ನ ಒಳಗೂ ಯಾವ ವಿದ್ಯಾರ್ಥಿಯೂ ಇರಲಿಲ್ಲ. ಸ್ಟೀಲ್ ಟೇಬಲ್‌ಗಳ ಮೇಲೆ ಸಾಲಾಗಿ ಅರ್ಧ ಕತ್ತರಿಸಿದಂತಿದ್ದ ಕಪ್ಪು ಬಣ್ಣಕ್ಕೆ ತಿರುಗಿದ್ದ ಶವಗಳು ಮಾತ್ರ ಕಂಡವು. ಮಧ್ಯಾಹ್ನ ಮೂರು ಗಂಟೆಯಾದುದರಿಂದ ಅನಾಟಮಿ ವಿಭಾಗದ ಶಿಕ್ಷಕರು ತಮ್ಮ ರೂಮುಗಳನ್ನು ಸೇರಿಕೊಂಡಿದ್ದರು.

ಇನ್‌ಸ್ಪೆಕ್ಟರ್ ಕುಲಕರ್ಣಿ ನೇರವಾಗಿ ಪ್ರೊಫೆಸರ್ ಛೇಂಬರಿನ ಬಾಗಿಲ ಬಳಿ ನಿಂತು, 'ಸರ್ ಒಳಗೆ ಬರಬಹುದೇ' ಎಂದು ಕೇಳಿದರು.

ಏನನ್ನೋ ಓದುತ್ತಿದ್ದ ಪ್ರೊಫೆಸರ್ ಇಳಂಗೋವನ್ ತಲೆ ಎತ್ತಿ ನೋಡಿದರು. ಅವರ ಮುಖದಲ್ಲಿ ಅಸಮಾಧಾನ ಮೂಡಿದ್ದನ್ನು ಕಂಡು, 'ಏನ್ ಮಾಡಲಿ ಸರ್, ಅನುಮಾನದ ವಾಸನೆ ಬಂದರೆ ನಾವು ಬೇಟೆ ನಾಯಿಗಳ ತರಹ ಸುತ್ತಿ ಬಳಸಿ ಅದೇ ಜಾಗಕ್ಕೆ ಬರುತ್ತೇವೆ. ನಾನು ಒಳಗೆ ಬರಬಹುದಾ?' ಎಂದು ಕೇಳಿದರು.

'ಒಳಗೆ ಬಂದಾಗಿದೆಯಲ್ಲಾ? ಇನ್ನು ಕೇಳುವುದು ಏನಿದೆ? ಬನ್ನಿ... ಕೂತ್ಕೊಳ್ಳಿ. ಆ ಹುಡುಗಿಯ ಪತ್ತೆಯಾಯಿತಾ?' ಎಂದು ಕೇಳಿದರು ಪ್ರೊಫೆಸರ್. ಅವರ ಸ್ವರದಲ್ಲಿ ಕಂಡೂ ಕಾಣದಂತಹ ವ್ಯಂಗ್ಯವಿತ್ತು. ಪೊಲೀಸ್ ಇಲಾಖೆಯೆಂದರೆ ತಮಗೆ ಅಷ್ಟಕಷ್ಟೆ ಎಂಬುದನ್ನು ಸ್ಪಷ್ಟಪಡಿಸುವ ಹಾಗಿತ್ತು.

'ಮೊದಲ ಬಾರಿಗೆ ವೀಕ್ಷಣೆಗೆಂದು ಬಂದಿದ್ದೆ. ಈ ಬಾರಿ ವಿಚಾರಣೆಗಾಗಿ ಬಂದಿದ್ದೇನೆ.'

'ಓಹ್! ಹೌದಾ ಅಪರಾಧಿ ಸಿಕ್ಕನಾ? ಹುಡುಗಿ ಸಿಕ್ಕಳಾ?'